ಇ) ನಗರ ಪ್ರದೇಶದಲ್ಲಿ ನಿವೇಶನರಹಿತ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಲು ಸರ್ಕಾರಿ ಭೂಮಿ ಬೇಡಿಕೆಯಷ್ಟು ಲಭ್ಯವಿಲ್ಲದಿರುವ ಕಾರಣ ಖಾಸಗಿ ಜಮೀನು ಖರೀದಿಸಲು ಅವಕಾಶ ಮಾಡಲಾಗಿದೆ.

ಖಾಸಗಿ ಜಮೀನುಗಳನ್ನು ಖರೀದಿಸಲು ವಸತಿ ಇಲಾಖೆ ಪತ್ರ ಸಂಖ್ಯೆ ವಇ 57/ಹೆಚ್.ಎಎಸ್/2007, ದಿನಾಂಕ: 04-08-2007ರಲ್ಲಿ ಇದ್ದಂತೆ ಮಾರ್ಗಸೂಚಿ ಬೆಲೆಯ ಎರಡರಷ್ಟು ಬೆಲೆಗೆ ಜಮೀನು ಖರೀದಿಸಲು ಅವಕಾಶ ಇರುತ್ತದೆ.

ಒಂದು ವೇಳೆ ಈ ಬೆಲೆಗೂ ಜಮೀನುಗಳು ದೊರಕದೇ ಇದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದು ಖರೀದಿಸಲು ಕೂಡ ಅವಕಾಶ ಕಲ್ಪಿಸಲಾಗಿದೆ.

ಈ) ಆದರೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಸ್ಥಳೀಯ ಸಂಸ್ಥೆಗಳ ಮೂಲಕ ನಿವೇಶನರಹಿತರು ಮತ್ತು ವಸತಿರಹಿತರ ಸಮೀಕ್ಷೆ ನಡೆಸಲಾಗಿದ್ದು ಈ ಸಮೀಕ್ಷೆಯ ಪ್ರಕಾರ ರಬಕವಿ ಬನಹಟ್ಟಿ, ತೇರದಾಳ ಮತ್ತು ಮಹಾಲಿಂಗಪೂರದಲ್ಲಿ ಕಂಡು ಬಂದಿರುವ ನಿವೇಶನ ರಹಿತರು ಮತ್ತು ವಸತಿ ರಹಿತರ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.

ಸ್ಥಳೀಯ ಸಂಸ್ಥೆಗಳು	ನಿವೇಶನ ರಹಿತರು	ವಸತಿ ರಹಿತರು
ರಬಕವಿ ಬನಹಟ್ಟಿ	250	944
ತೇರದಾಳ	113	33
ಮಹಾಲಿಂಗಪೂರ	735	1144
ಒಟ್ಟು	**1098**	**2121**

ನಗರ ಆಶ್ರಯ ಯೋಜನೆಯಡಿ ಘಟಕ ವೆಚ್ಚವನ್ನು ಹೆಚ್ಚಿಸಿ ಮನೆಗಳ ನಿರ್ಮಾಣ ಕೈಗೊಂಡು ಆಶ್ರಯ ಮನೆಗಳನ್ನು ಒದಗಿಸಲಾಗುವುದು.

988 ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ಧಾರವಾಡ ಪೂರ್ವ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದ ಮ್ಯಾದಾರ ಬೀದಿಯಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯು ಇಕ್ಕಟ್ಟಿನಿಂದ ಕೂಡಿದ್ದು, ಸದರಿ ಕಛೇರಿಯನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಯಾವ ಕಟ್ಟಡಕ್ಕೆ ಸ್ಥಳಾಂತರ ಗೊಳಿಸಲಾಗುವುದು;

ಇ) ಕಟ್ಟಡವನ್ನು ಸ್ಥಳಾಂತರಿಸದಿರುವುದಕ್ಕೆ ಕಾರಣಗಳೇನು (ವಿವರ ಒದಗಿಸುವುದು)?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲಾಖಾ ಮುಖ್ಯಸ್ಥರಿಂದ ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

922 ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಒದಗಿಸಿರುವ ಅನುದಾನ ಎಷ್ಟು;

ಆ) ವಿಶ್ವವಿದ್ಯಾಲಯದ ನೂತನ ಕೇಂದ್ರಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನ ಎಷ್ಟು;

ಇ) ಕಡೂರಿನಲ್ಲಿ ನೂತನವಾಗಿ ಆರಂಭಗೊಂಡಿರುವ ಕುವೆಂಪು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ಕಟ್ಟಡ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ನೀಡಿರುವ ಅನುದಾನ ಎಷ್ಟು; (ಮಾಹಿತಿ ನೀಡುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ರೂ. 400.00 ಲಕ್ಷಗಳು

ಆ) ರೂ. 200.00 ಲಕ್ಷಗಳು

ಇ) 2009–10ನೇ ಸಾಲಿನಲ್ಲಿ ಕಡೂರಿನಲ್ಲಿ ನೂತನವಾಗಿ ಆರಂಭಗೊಂಡಿರುವ ಕುವೆಂಪು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ಕಟ್ಟಡ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿಗಾಗಿ ರೂ. 200.00 ಲಕ್ಷಗಳನ್ನು ನಿಗದಿಗೊಳಿಸಲಾಗಿದ್ದು, ಈ ಮೊತ್ತವನ್ನು ನಾಲ್ಕು ಸಮಾನ ತ್ರೈಮಾಸಿಕ ಕಂತುಗಳಾಗಿ ಬಿಡುಗಡೆ ಮಾಡಬೇಕಾಗಿದ್ದು, ಅದರಲ್ಲಿ ಈಗಾಗಲೇ ಮೊದಲನೇ ತ್ರೈಮಾಸಿಕ ಕಂತಿನ ಮೊತ್ತ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.